1ನೇ ಹಾಗೂ 2ನೇ ಹಂತ ಕುರಿಮಂಡಿ, ಎನ್.ಆರ್. ಮೊಹಲ್ಲಾದ ಕೆಲವು ಪ್ರದೇಶಗಳು ಕ್ಯಾತ ಮಾರನಹಳ್ಳಿ ಸಿದ್ಧಾರ್ಥ ಬಡಾವಣೆ ಉದಯಗಿರಿ ಪ್ರದೇಶಗಳಿಗೆ ಕಾವೇರಿ ನೀರು ಸರಬರಾಜು ಮಾಡಲಾಗುತ್ತಿದೆ. ಮತ್ತು 8 ಎಂ.ಜಿ.ಡಿ. ಯೋಜನೆಯ ಉಳಿಕೆ ಕಾಮಗಾರಿಗಳು ಮುಗಿಯದ ನಂತರ ಉಳಿಕೆ ಪ್ರದೇಶಗಳಿಗೂ ಸಹ ಕಾವೇರಿ ನೀರು ಸರಬರಾಜು ಮಾಡಬಹುದಾಗಿದೆ. ಇದಲ್ಲದೆ ಕಾವೇರಿ 4ನೇ ಹಂತ (ಮೇಳಾಪುರ) ಕಾಮಗಾರಿಗಳ ಪ್ರಗತಿಯಲ್ಲಿದ್ದು 2001 ಇಸವಿಯ ಒಳಗೆ ಮುಗಿಯುವ ಹಂತದಲ್ಲಿದ್ದು ನಂತರ ಎಲ್ಲಾ ಪ್ರದೇಶಗಳಿಗೂ ಕಾವೇರಿ ನೀರನ್ನು ಸರಬರಾಜು ಮಾಡಲಾಗುವುದು.

ಚಾಮರಾಜ ಕ್ಷೇತ್ರದಲ್ಲಿ ಹೊಸದಾಗಿ ಪೈಪ್‌ಲೈನ್ ಅಳವಡಿಸುವುದು.

110(426) ಶ್ರೀ ಹೆಚ್. ಎಸ್. ಶಂಕರಲಿಂಗೇಗೌಡ (ಚಾಮರಾಜ) :— ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಹೊಂಗಳ್ಳಿಯಿಂದ ಚಾಮರಾಜ ಕ್ಷೇತ್ರಕ್ಕೆ ಹೊಸದೊಂದು ನೀರಿನ ಸಂಪರ್ಕ ಕಲ್ಪಿಸಬೇಕೆಂದು ಕೋರಿದ್ದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

2. ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಂ.ಎಸ್. ಪಾಟೀಲ್ (ನಗರಾಭಿವೃದ್ಧಿ ಸಚಿವರು) :—

ಅ) ಬಂದಿದೆ.

ಆ) ಹೊಂಗಳ್ಳಿಯಿಂದ ಚಾಮರಾಜ ಕ್ಷೇತ್ರಕ್ಕೆ ಹೊಸದೊಂದು ಪೈಪ್ ಲೈನ್ ಅಳವಡಿಸಲು ಅಂದಾಜು ಪಟ್ಟಿಯನ್ನು ಕರ್ನಾಟಕ ಜಲ ಮಂಡಳಿಯು ತಯಾರಿಸುತ್ತಿದೆ.

ಏಷ್ಯನ್ ಅಭಿವೃದ್ಧಿ ಬ್ಯಾಂಕ್‌ನಿಂದ ಪಟ್ಟಣಗಳ ಅಭಿವೃದ್ಧಿ.

111(301) ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) :— ಮಾನ್ಯ ನಗರಾಭಿವೃದ್ಧಿ ಸಚಿವರು

ಅ) ಏಷ್ಯನ್ ಅಭಿವೃದ್ಧಿ ಬ್ಯಾಂಕ್ ಕರ್ನಾಟಕದ ಕರಾವಳಿ ಪಟ್ಟಣದ ಅಭಿವೃದ್ಧಿಗಾಗಿ ಹಾಕಿಕೊಂಡಿರುವ ಯೋಜನೆಗಳು ಯಾವುವು

ಆ) ಈ ಯೋಜನೆಯಡಿಯಲ್ಲಿ ಯಾವ್ಯಾವ ಪಟ್ಟಣಗಳಲ್ಲಿ ಯಾವ್ಯಾವ ಕಾಮಗಾರಿ ಕೈಗೊಳ್ಳಲಾಗುವುದು ಹಾಗೂ ಎಂದಿನಿಂದ ಪ್ರಾರಂಭಿಸಲಾಗುವುದು?

ಶ್ರೀ ಎಂ.ಎಸ್. ಪಾಟೀಲ್ (ನಗರಾಭಿವೃದ್ಧಿ ಸಚಿವರು) :—

ಅ) ಏಷ್ಯನ್ ಅಭಿವೃದ್ಧಿ ಬ್ಯಾಂಕ್ ಕರ್ನಾಟಕದ ಕರಾವಳಿ ಪಟ್ಟಣದ ಅಭಿವೃದ್ಧಿಗಾಗಿ ಹಾಕಿಕೊಂಡಿರುವ ಯೋಜನೆಗಳು ಈ ಕೆಳಗಿನಂತಿವೆ.

1) ತರಬೇತಿ ಮತ್ತು ಸಾಮರ್ಥ್ಯ ವೃದ್ಧಿ ಸಮುದಾಯ ತೊಡಗಿಸಿಕೊಳ್ಳುವಿಕೆ ಮತ್ತು ಬಡತನದ ನಿರ್ಮೂಲನೆ.

2) ನೀರು ಸರಬರಾಜು ಯೋಜನೆಗಳು

3) ಒಳಚರಂಡಿ ಯೋಜನೆ ತ್ಯಾಜ್ಯವಸ್ತುಗಳ ವಿಲೇವಾರಿ ಯೋಜನೆ.

4) ರಸ್ತೆ ಹಾಗೂ ಸೇತುವೆ ನಿರ್ಮಾಣ ಯೋಜನೆಗಳು

5) ಕರಾವಳಿ ಪರಿಸರ ಅಭಿವೃದ್ಧಿ ಯೋಜನೆ ಇದರಡಿ ಕಡಲೊರೆತ ತಡೆ ಹಾಗೂ ಮ್ಯಾಂಗ್ರೋವ್ ಎಫೋರೆಸ್ಟೇಷನ್ ಸೇರಿದೆ.

6) ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಬೇಕಾದ ವಾಹನಗಳು ಯಂತ್ರಗಳು ಹಾಗೂ ಸಿಬ್ಬಂದಿಗಳನ್ನು ಒದಗಿಸುವ ವ್ಯವಸ್ಥೆ.

ಆ) ಎ) ಈ ಕೆಳಗೆ ಕಾಣಿಸಿದ ಕಾಮಗಾರಿಗಳನ್ನು ಈ ಯೋಜನೆಯಡಿ ಬರುವ ಎಲ್ಲಾ ಹತ್ತು ಪಟ್ಟಣಗಳಲ್ಲಿ ಕೈಗೊಳ್ಳಲಾಗುವುದು. ಅವುಗಳೇಂದರೆ ಅಂಕೋಲ ಭಟ್ಕಳ, ದಾಂಡೇಲಿ, ಕಾರವಾರ, ಕುಂದಾಪುರ, ಮಂಗಳೂರು, ಪುತ್ತೂರು, ಶಿರಸಿ, ಉಡುಪಿ ಹಾಗೂ ಬಳ್ಳಾರಿ.

1) ಅನೈರ್ಮಟ್ ಸಾನಿಟೆಷನ್‌ನಿನ ಅಭಿವೃದ್ಧಿ

2) ಮಳೆ ನೀರಿನ ಚರಂಡಿಗಳ ರಚನೆ

3) ಘನತ್ಯಾಜ ವಸ್ತುಗಳ ವಿಲೇವಾರಿ

4) ಸಾರ್ವಜನಿಕ ಮಾರುಕಟ್ಟೆಗಳ ಅಭಿವೃದ್ಧಿ

5) ಹೆಣಗಳನ್ನು ಸುಡುವುದಕ್ಕೆ ಸಿಲಿಕನ್ ಪತ್ರಯನ್ನು ಒದಗಿಸುವುದಕ್ಕೆ

6) ಕೊಳಚೆ ಪ್ರದೇಶಗಳ ನಿರ್ಮೂಲನೆ ಹಾಗೂ ಲೋ ಕಾಸ್ಟ್ ಸಾನಿಟೆಷನ್.

ಬಿ) ಅಂಕೋಲ, ಭಟ್ಕಳ, ದಾಂಡೇಲಿ, ಕಾರವಾರ, ಮಂಗಳೂರು, ಪುತ್ತೂರು, ಶಿರಸಿ ಮತ್ತು ಉಡುಪಿನಗರಗಳಲ್ಲಿ ಹಾಲಿ ಇರುವ ನೀರು ಸರಬರಾಜು ಯೋಜನೆಗಳನ್ನು ಅಭಿವೃದ್ಧಿಪಡಿಸಲಾಗುವುದು ಹಾಗೂ ಉಳ್ಳಾಲ ಮತ್ತು ಕುಂದಾಪುರ ನಗರಗಳಿಗೆ ಹೊಸದಾಗಿ ನೀರು ಸರಬರಾಜು ಯೋಜನೆಗಳನ್ನು ಅಳವಡಿಸಲಾಗುವುದು.

ಸಿ) ಮಂಗಳೂರು, ಉಡುಪಿ, ಭಟ್ಕಳ, ಹಾಗೂ ಶಿರಸಿ ನಗರಗಳಲ್ಲಿರುವ ಒಳಚರಂಡಿ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಲಾಗುವುದು ಕಾರವಾರ ನಗರಕ್ಕೆ ಹೊಸದಾಗಿ ಒಳಚರಂಡಿ ವ್ಯವಸ್ಥೆಯನ್ನು ಒದಗಿಸಲಾಗುವುದು.

ಡಿ) ಎಲ್ಲಾ ಪಟ್ಟಣಗಳಲ್ಲಿ ರಸ್ತೆಗಳನ್ನು ಅಭಿವೃದ್ಧಿಗೊಳಿಸಲಾಗುವುದು. ಪುತ್ತೂರಿನಲ್ಲಿ ಹೊಸ ರಸ್ತೆ ನಿರ್ಮಿಸಲಾಗುವುದು.

ಇ) ಕಡಿಮೆ ವೆಚ್ಚದ ಮನೆಗಳನ್ನು ಭಟ್ಕಳ ಹಾಗೂ ದಾಂಡೇಲಿ ನಗರಗಳಲ್ಲಿ ನಿರ್ಮಿಸಲಾಗುವುದು.

ಈಗಿರುವ ಅಂದಾಜಿನಂತೆ ಏಷ್ಯನ್ ಅಭಿವೃದ್ಧಿ ಬ್ಯಾಂಕ್ ಸಾಲವನ್ನು ಮಂಜೂರು ಮಾಡಿದಲ್ಲಿ ಈ ಮೇಲಿನ ಕಾಮಗಾರಿಗಳನ್ನು ಅಕ್ಟೋಬರ್ 1999 ನಂತರ ಕೈಗೊಳ್ಳಲಾಗುವುದು.

2) ಉಪಾಧ್ಯಕ್ಷರ ಚುನಾವಣೆ.

ಅಧ್ಯಕ್ಷರು :— ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ಉತ್ತರಗಳನ್ನು ಸದನದ ಮುಂದೆ ಮಂಡಿಸಲಾಯಿತು.

ಅಧ್ಯಕ್ಷರು :— ಮೂರು ಸೂಚನೆಗಳನ್ನು ನನ್ನ ಕಡೆಗೆ ಕಳುಹಿಸಿಕೊಟ್ಟಿದ್ದಾರೆ. ಮೊದಲನೇ ಸೂಚನೆಯನ್ನು ಓದುತ್ತೇನೆ. ಸೂಚಕರು ಅನುಮೋದಕರು ಅದನ್ನು ಒತ್ತಾಯ ಮಾಡುವುದಿಲ್ಲವೆಂದರೆ ನಾನು ಎರಡನೇ ಸೂಚನೆಗೆ ಹೋಗುತ್ತೇನೆ ಮೊದಲನೇ ಸೂಚನೆ ಏನೆಂದರೆ ಶ್ರೀಮತಿ ಎನ್. ಜ್ಯೋತಿ ರೆಡ್ಡಿ ಅವರನ್ನು ವಿಧಾನಸಭೆಯ ಉಪಾಧ್ಯಕ್ಷರನ್ನಾಗಿ ಚುನಾಯಿಸಬೇಕೆಂದು ಶ್ರೀಮತಿ ವಿಜಯಲಕ್ಷ್ಮಮ್ಮ ಬಂಡಿ ಸಿದ್ದೇಗೌಡ ಅವರು ಸೂಚಿಸುವುದು. ಶ್ರೀಮತಿ ಡಿ.ಜಿ. ಹೇಮಾವತಿಯವರು ಅನುಮೋದಿಸುವುದು.

ಶ್ರೀಮತಿ ವಿಜಯಲಕ್ಷ್ಮಮ್ಮ ಬಂಡಿ ಸಿದ್ದೇಗೌಡ :— ಮಾನ್ಯ ಅಧ್ಯಕ್ಷರೆ, ಶ್ರೀಮತಿ ಎನ್. ಜ್ಯೋತಿ ರೆಡ್ಡಿ ಅವರನ್ನು ವಿಧಾನಸಭೆಯ ಉಪಾಧ್ಯಕ್ಷರನ್ನಾಗಿ ಚುನಾಯಿಸಬೇಕೆಂಬ ಸೂಚನೆಯನ್ನು ಒತ್ತಾಯ ಮಾಡುವುದಿಲ್ಲ.

ಈಗ ನಾನು ಎರಡನೇ ಸೂಚನೆಯನ್ನು ಓದುತ್ತೇನೆ.

ಅಧ್ಯಕ್ಷರು :— ಶ್ರೀ ಸಿ.ಎನ್. ಪುಟ್ಟೇಗೌಡ ಅವರನ್ನು ವಿಧಾನಸಭೆಯ ಉಪಾಧ್ಯಕ್ಷರನ್ನಾಗಿ ಚುನಾಯಿಸಬೇಕೆಂದು ಶ್ರೀ ಹೆಚ್.ಎಸ್. ಪ್ರಕಾಶ್‌ರವರು ಸೂಚಿಸುವುದು.

ಶ್ರೀ ಬಿ.ಟಿ. ದೇವೇಗೌಡ :— ಅವರು ಅನುಮೋದಿಸುವುದು.